# ಶಾಲೆಗಳನ್ನು ಪುನರಾರಂಭಿಸಿ – ಕಲಿಕಾ ನಷ್ಟವನ್ನು ಸರಿದೂಗಿಸಲು ಗಮನ ಹರಿಸಿ: ಶಿಕ್ಷಕರ ಸ್ಪಷ್ಟ ಅಪೇಕ್ಷೆ

ಶಿಕ್ಷಣ ಕ್ಷೇತ್ರದ ಅಧ್ಯಯನ | ಆಗಸ್ಟ್ 2021



CC BY NC SA

ಈ ರೀತಿಯ ಅಧ್ಯಯನ ವರದಿಗಳು, ಭಾರತದಲ್ಲಿ ಶಾಲಾ ಶಿಕ್ಷಣದ ಗುಣಮಟ್ಟ ಸುಧಾರಿಸಲು ಮತ್ತು ಸಮತೆಯನ್ನು ಸಾಧಿಸಲು ಅಜೀಂ ಪ್ರೇಮ್‌ಜಿ ಫೌಂಡೇಷನ್ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಫಲಿತಗಳನ್ನು ಪ್ರಸ್ತುತಪಡಿಸುತ್ತದೆ. ನಮ್ಮ ಅಧ್ಯಯನದ ಫಲಿತಾಂಶವನ್ನು, ಶಿಕ್ಷಣ ತಜ್ಞರು ಗಮನಿಸಿರುವ, ಶಿಕ್ಷಣ ಕ್ಷೇತ್ರವು ಎದುರಿಸುತ್ತಿರುವ ಮುಖ್ಯ ಸಮಸ್ಯೆಗಳನ್ನು ಶೈಕ್ಷಣಿಕ ನೀತಿನಿಯಮ ರೂಪಿಸುವವರಿಗೆ ಮತ್ತು ಅದನ್ನು ಜಾರಿಗೊಳಿಸುವವರಿಗೆ ತಲುಪಿಸುವುದಾಗಿದೆ. ಈ ಅಧ್ಯಯನ ವರದಿಯಲ್ಲಿ ಪ್ರಕಟಗೊಂಡ ವಿಚಾರಗಳು ಸಂಶೋಧನಾ ತಂಡದ ನಿಲುವುಗಳಾಗಿವೆಯೇ ಹೊರತು, ಅವು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವನ್ನು ಒಳಗೊಂಡು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ನಿಲುವು ಆಗಿರುವುದಿಲ್ಲ.

# ಶಾಲೆಗಳನ್ನು ಪುನರಾರಂಭಿಸಿ – ಕಲಿಕಾ ನಷ್ಟವನ್ನು ಸರಿದೂಗಿಸಲು ಗಮನ ಹರಿಸಿ: ಶಿಕ್ಷಕರ ಸ್ಪಷ್ಟ ಅಪೇಕ್ಷೆ

## ಸಂಶೋಧನಾ ತಂಡ | ಅಜೀಂ ಪ್ರೇಮ್‌ಜಿ ಫೌಂಡೇಷನ್

ಸಂಪರ್ಕಿಸಿ : field.research@azimpremjifoundation.org

## ಎ. ಪರಿಚಯ

ಪ್ರಾಥಮಿಕ ಶಾಲೆಗಳನ್ನು ಮಾರ್ಚ್ 2020ರಿಂದ ಸುಮಾರು 17 ತಿಂಗಳು ಮತ್ತು ಸುಮಾರು 300 ಕೆಲಸದ ದಿನಗಳ ಕಾಲ ದೇಶದಾದ್ಯಂತ ಮುಚ್ಚಲಾಗಿತ್ತು. ಇತ್ತೀಚೆಗೆ, ಅಗತ್ಯ ಸುರಕ್ಷತಾ ನಿಯಮಾವಳಿಗಳೊಂದಿಗೆ, ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆಗಳನ್ನು ಮೊದಲಿಗೆ ತೆರೆಯುವುದರೊಂದಿಗೆ ಶಾಲೆಗಳನ್ನು ಪುನರಾರಂಭಿಸಬೇಕು ಎಂದು ತಜ್ಞರು ಶಿಫಾರಸ್ಸು ಮಾಡಿದ್ದಾರೆ.[1]

ಮಕ್ಕಳು ಶಾಲೆ ಮತ್ತು ತರಗತಿ ಕೋಣೆಗಳಿಗೆ ಮರಳಿ ಬಂದು ತಮ್ಮ ಕಲಿಕೆಯಲ್ಲಿ ತೊಡಗಿಕೊಳ್ಳುವ ಅಗತ್ಯತೆಯ ಕುರಿತು ಹಾಗೂ ಶಾಲೆಗಳನ್ನು ಮುಚ್ಚಿದ ಕಾರಣ ಕಲಿಕೆಯಲ್ಲಿ ಉಂಟಾಗಿರುವ ನಷ್ಟವನ್ನು ಭರಿಸುವ ಕುರಿತು ಪ್ರಾಥಮಿಕ ಶಾಲೆಗಳ ಶಿಕ್ಷಕರು ತೀವ್ರ ಕಾಳಜಿಯನ್ನು ಹೊಂದಿದ್ದಾರೆ. ಅಜೀಂ ಪ್ರೇಮ್‌ಜಿ ಫೌಂಡೇಷನ್ 5 ರಾಜ್ಯಗಳ 18 ಜಿಲ್ಲೆಗಳಲ್ಲಿರುವ 363 ಪ್ರಾಥಮಿಕ ಶಾಲಾ ಶಿಕ್ಷಕರನ್ನು ಒಳಗೊಂಡು 2021ರ ಆಗಸ್ಟ್ ತಿಂಗಳಿನಲ್ಲಿ ನಡೆಸಿದ ಕ್ಷೇತ್ರ ಅಧ್ಯಯನದ ಫಲಿತವು ಇದಾಗಿದೆ.

ಬೇರೆ ಬೇರೆ ಪ್ರದೇಶಗಳಲ್ಲಿ ನಡೆಸಿದ ಈ ಅಧ್ಯಯನದ ಪ್ರಮುಖ ಫಲಿತಗಳೆಂದರೆ:

1. ಮುಖ್ಯವಾಗಿ ಪ್ರಾಥಮಿಕ ಹಂತದಲ್ಲಿ ಕಲಿಕೆಗೆ ಮುಖ್ಯವಾಗಿರುವ ನಿರಂತರ ಮುಖಾಮುಖಿ ಒಡನಾಟವನ್ನು ಮಕ್ಕಳು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ. ಶೈಕ್ಷಣಿಕ ವರ್ಷ 2020-21 ರಲ್ಲಿ ಶಾಲೆಗಳನ್ನು ಮುಚ್ಚಿದ್ದ ಕಾರಣ ವಿವಿಧ ವಿಧಾನಗಳ ಮೂಲಕ ವಿದ್ಯಾರ್ಥಿಗಳ ಜೊತೆ ಸಂವಹನ ನಡೆಸಿದ್ದ ಶಿಕ್ಷಕರು, ಆ ವರ್ಷದಲ್ಲಿ ಪಠ್ಯಕ್ರಮವನ್ನು ಸರಿಯಾಗಿ ಪೂರ್ಣಗೊಳಿಸಲು ಆಗಿಲ್ಲ ಎಂದು ಹೇಳಿದ್ದಾರೆ. ಅಲ್ಲದೆ ಚಿತ್ರವೊಂದನ್ನು ವಿವರಿಸುವುದು, ಅರ್ಥ ಗ್ರಹಿಕೆಯೊಂದಿಗೆ ಓದುವುದು, ಚಿತ್ರವನ್ನು ಆಧರಿಸಿ ಸರಳ ವಾಕ್ಯಗಳನ್ನು ಬರೆಯುವುದು ಮತ್ತು ಗಣಿತದ ಮೂಲಭೂತ ಕ್ರಿಯೆಗಳನ್ನು ಮಾಡುವುದು ಮುಂತಾದ ಬುನಾದಿ ಸಾಮರ್ಥ್ಯಗಳಲ್ಲಿ ಹಿನ್ನಡೆ ಉಂಟಾಗಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

2. ಶಾಲೆಗಳು ಮತ್ತೆ ಪುನರಾರಂಭಗೊಂಡಾಗ ಕಲಿಕೆಯು ಪ್ರತಿ ಮಗುವಿನ ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಇರಬೇಕೇ ಹೊರತು ಸಾಮಾನ್ಯ ಪಠ್ಯಕ್ರಮವನ್ನು ಆಧರಿಸಿ ಇರಬಾರದು. ಇಷ್ಟು ದೊಡ್ಡ ಪ್ರಮಾಣದಲ್ಲಿ ಕಲಿಕಾ ನಷ್ಟ ಉಂಟಾಗಿರುವುದರಿಂದ, ಶಾಲೆಗಳನ್ನು ಮತ್ತೆ ತೆರೆದಾಗ ಪ್ರತಿ ತರಗತಿಯಲ್ಲಿ ತರಗತಿಗೆ ನಿಗದಿಪಡಿಸಲಾದ ಸಾಮರ್ಥ್ಯಕ್ಕೆ ಅನುಗುಣವಾಗಿ ಬುನಾದಿ ಸಾಮರ್ಥ್ಯಗಳ ಮೌಲ್ಯಮಾಪನವನ್ನು ನಡೆಸಬೇಕು.

3. ಹೀಗೆ ಮಾಡಬೇಕಾದರೆ ಬುನಾದಿ ಸಾಮರ್ಥ್ಯಕ್ಕೆ ಹೊಂದಿಕೊಂಡು ಮುಂದುವರಿಯುವುದಕ್ಕಾಗಿ ಪಠ್ಯಕ್ರಮದ ಭಾರವನ್ನು ತಗ್ಗಿಸಬೇಕು. ಅಲ್ಲದೆ ಮೂಲ ಅಕ್ಷರಜ್ಞಾನ ಮತ್ತು ಸಂಖ್ಯಾಜ್ಞಾನಕ್ಕಾಗಿ ಪ್ರಜ್ಞಾಪೂರ್ವಕ ಮತ್ತು ನಿಖರವಾದ ಯೋಜನೆ ರೂಪಿಸಿ ಒತ್ತು ನೀಡಬೇಕು.

4. ಪಠ್ಯಕ್ರಮದ ಬದಲಾವಣೆ ಮಾತ್ರವಲ್ಲದೆ ಮಕ್ಕಳ ಸಮಾಜೋ-ಭಾವನಾತ್ಮಕ ಸಮಸ್ಯೆಗಳಿಗೂ ಪ್ರತಿಸ್ಪಂದಿಸುವ ರೀತಿಯಲ್ಲಿ ಬೋಧನೆ ಮತ್ತು ಕಲಿಕಾ ವಿಧಾನವನ್ನು ಅಳವಡಿಸಿಕೊಳ್ಳಬೇಕು. ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ವಿವಿಧ ರೀತಿಯ ಬೋಧನಾ-ಕಲಿಕೆ ಪರಿಕರಗಳ ಅಗತ್ಯವಿದೆ.

5. ಕಲಿಕಾ ನಷ್ಟವನ್ನು ಸರಿದೂಗಿಸುವುದಕ್ಕಾಗಿ ಶಿಕ್ಷಕರಿಗೆ ಸ್ವಾಯತ್ತತೆ, ಮೇಲಧಿಕಾರಿಗಳ ಬೆಂಬಲ, ಸಮಯ ಮತ್ತು ತಾಳ್ಮೆಯ ಅಗತ್ಯವಿದೆ. ತಮಗೆ ಸಂಬಂಧಪಟ್ಟ ತರಗತಿಗಳಲ್ಲಿ ಉಂಟಾಗುವ ಕಲಿಕಾ ನಷ್ಟವನ್ನು ಸರಿದೂಗಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ಶಿಕ್ಷಕರಿಗೆ ಸಾಕಷ್ಟು ಸಮಯವನ್ನು ನೀಡದ ಹೊರತು, ಪಠ್ಯಕ್ರಮ ಮತ್ತು ಬೋಧನಾ ವಿಧಾನವನ್ನು ಸೂಕ್ತವಾಗಿ ಅಳವಡಿಸಿಕೊಳ್ಳುವುದೂ ಸೇರಿದಂತೆ ಈ ದಿಸೆಯಲ್ಲಿ ತೆಗೆದುಕೊಳ್ಳುವ ಯಾವುದೇ ಇತರ ಕ್ರಮಗಳು ಪ್ರಯೋಜನಕ್ಕೆ ಬರುವುದಿಲ್ಲ.

1 The India Task Force. The Lancet COVID-19 Commission. (2021). Reopening schools after COVID-19 closures. https://static1.squarespace.com/static/5ef3652ab722df11fcb2ba5d/t/60a3cff2b425ae21a5b49405/1621348340073/India+TF+Reopening+Schools+April+2021.pdf; Arakal, R.A. (2021, June 22). Karnataka high-level body recommends reopening schools in staggered manner. Indian Express. https://indianexpress.com/article/cities/bangalore/karnataka-committee-recommends-reopening-schools-in-staggered-manner-7369356/; Ghosh, P. (2021, July 23). Is reopening schools in India risky now? What experts, government said. Hindustan Times. https://www.hindustantimes.com/india-news/is-reopening-schools-in-india-risky-now-what-experts-government-said-101627048660031.html

## ಬಿ. ಶಾಲೆಗಳು ಪುನರಾರಂಭಗೊಂಡಾಗ ಏನು ಮಾಡಬೇಕು

ಶಾಲೆಗಳು ಮುಚ್ಚಿದ ಕಾರಣ ಉಂಟಾಗಿರುವ ಪರಿಣಾಮವನ್ನು ಸರಿಪಡಿಸುವುದಕ್ಕಾಗಿ ಈ ಕೆಳಗಿನ ಕ್ರಮಗಳು ಅತ್ಯವಶ್ಯಕ. ಮೊದಲನೆಯದಾಗಿ, ಶಾಲೆಗಳನ್ನು ಆದಷ್ಟು ಬೇಗ ಪುನರಾರಂಭಿಸಬೇಕು. ಎರಡನೆಯದಾಗಿ, ಕಲಿಕೆಯ ವಿಷಯದಲ್ಲಿ ಮಕ್ಕಳಿಗೆ ತುಂಬಾ ಆತ್ಮೀಯರಾಗಿರುವ ವ್ಯಕ್ತಿಯು (ಮುಖ್ಯವಾಗಿ ಶಿಕ್ಷಕರು), ಕಲಿಕಾ ನಷ್ಟವನ್ನು ಸರಿದೂಗಿಸಿಕೊಳ್ಳುವುದನ್ನು ಬೆಂಬಲಿಸುವುದರ ಜೊತೆಗೆ ಮಕ್ಕಳು ಶಾಲೆಗೆ ಮರಳಿ ಶಾಲೆಯಲ್ಲಿಯೇ ಮುಂದುವರೆಯುವಂತೆ ಮಾಡುವುದಕ್ಕಾಗಿ ನಿರ್ಣಾಯಕ ಪಾತ್ರ ವಹಿಸಬೇಕಾಗುತ್ತದೆ.

ವಿದ್ಯಾರ್ಥಿಗಳೊಂದಿಗೆ ಮತ್ತು ಅವರ ಬೋಧನಾ-ಕಲಿಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುವ ಕುರಿತ ಪೂರ್ವಜ್ಞಾನ ಮತ್ತು ತಮ್ಮದೇ ಆದ ಅಭ್ಯಾಸಗಳ ಕುರಿತು ಪರ್ಯಾಲೋಚನೆ ನಡೆಸುವ ಅವರ ಸಾಮರ್ಥ್ಯ ಇವುಗಳನ್ನು ಆಧರಿಸಿ ಶಿಕ್ಷಕರನ್ನು ಅಜೀಂ ಪ್ರೇಮ್‌ಜಿ ಫೌಂಡೇಷನ್ ನಡೆಸಿದ ಈ ಅಧ್ಯಯನದ ಮಾದರಿಗಾಗಿ ಆಯ್ಕೆ ಮಾಡಲಾಯಿತು. ಫೌಂಡೇಷನ್, ಈ ಬದ್ಧತೆಯುಳ್ಳ ಮತ್ತು ಸಮರ್ಥ ಶಿಕ್ಷಕರೊಂದಿಗೆ ದೀರ್ಘಕಾಲದಿಂದ ನಿರಂತರವಾಗಿ ತೊಡಗಿಸಿಕೊಂಡು ಬಂದಿದೆ. ಈ ರೀತಿ ಉದ್ದೇಶಪೂರ್ವಕವಾಗಿ ಆರಿಸಿದ ಶಿಕ್ಷಕರಿಗಾಗಿ ಬಳಸಲಾದ ಸಂದರ್ಶನದ ಅನುಸೂಚಿಯನ್ನು ಪಠ್ಯಕ್ರಮ, ಬೋಧನಾ ವಿಧಾನ, ಮಕ್ಕಳ ಕಲಿಕೆ ಮತ್ತು ಸಮಾಜೋ-ಭಾವನಾತ್ಮಕ ಅಗತ್ಯತೆಗಳು ಮತ್ತು ಶಿಕ್ಷಕರಿಗೆ ಬೇಕಾಗುವ ನೆರವನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾದ ಪ್ರಮುಖ ಪ್ರಶ್ನೆಗಳ ಮೂಲಕ ಹೆಣೆಯಲಾಗಿದೆ. ಶಾಲೆ ಮುಚ್ಚಿದ್ದ ಸಂದರ್ಭದಲ್ಲಿ ಏನಾಗಿತ್ತು ಹಾಗೂ ಮುಖ್ಯವಾಗಿ ಶಾಲೆಗಳು ಮತ್ತೆ ಪುನರಾರಂಭವಾಗುವ ವೇಳೆ ಏನು ಮಾಡಬೇಕು ಎನ್ನುವ ಕುರಿತು ಮಾಹಿತಿಯನ್ನು ಕಲೆ ಹಾಕುವುದು ಈ ಅಧ್ಯಯನದ ಉದ್ದೇಶವಾಗಿತ್ತು. ವಿಸ್ತೃತ ಪ್ರಮಾಣದಲ್ಲಿ ಪ್ರತಿಕ್ರಿಯೆಗಳನ್ನು ಹೊರತರಲು ಈ ಪ್ರಶ್ನೆಗಳನ್ನು ಬಳಸಲಾಯಿತು ಹಾಗೂ ಸಂಶೋಧನಾ ತಂಡವು ನಂತರ ಇದನ್ನು ನಿರ್ದಿಷ್ಟ ಅಂಶಗಳಾಗಿ ವರ್ಗೀಕರಿಸಿತು.

ಈ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಎಲ್ಲಾ ಶಿಕ್ಷಕರು ಶಾಲೆ ಮುಚ್ಚಿದ್ದ ವೇಳೆ ನಿರಂತರವಾಗಿ ತಮ್ಮ ಮಕ್ಕಳೊಂದಿಗೆ ಸಂವಾದ ನಡೆಸಿದ್ದಾರೆ. ಬೋಧನೆ - ಕಲಿಕೆಯ ವಿಚಾರದಲ್ಲಿ ಹೇಳುವುದಾದರೆ, ಈ ಸಂಪರ್ಕವು, ಸರ್ಕಾರವು ಕಡ್ಡಾಯಗೊಳಿಸಿದ ಕಾರ್ಯಕ್ರಮಗಳು ಅಥವಾ ವಾಟ್ಸಾಪ್, ದೂರವಾಣಿ ಕರೆಗಳು ಅಥವಾ ಸಮುದಾಯದೊಳಗೆ ಸಣ್ಣ ಪಂಗಡಗಳಲ್ಲಿ ನಡೆಸಿದ ಚರ್ಚೆ - ಹೀಗೆ ಈ ಶಿಕ್ಷಕರು ಸ್ವತಂತ್ರವಾಗಿ ತೆಗೆದುಕೊಂಡ ಉಪಕ್ರಮಗಳನ್ನು ಒಳಗೊಂಡಿದೆ. ಅಲ್ಲದೆ, ಕಾರ್ಯಹಾಳೆ ಮತ್ತು ದಿನಸಿ ಒದಗಿಸುವ ಸಂದರ್ಭದಲ್ಲಿ ಅವರು ಮಕ್ಕಳೊಂದಿಗೆ ಸಂವಾದ ನಡೆಸಿದ್ದಾರೆ. ಹೆಚ್ಚಿನ ಶಿಕ್ಷಕರು, ಇತರ ಹಳ್ಳಿಗಳು/ನಗರಗಳಿಗೆ ಹೋದ ಮಕ್ಕಳೊಂದಿಗೆ ಕೂಡ ಸಂಪರ್ಕದಲ್ಲಿದ್ದರು.

ಶಾಲೆಗಳನ್ನು ಮುಚ್ಚಿದ್ದ ಕಾರಣ, ಸಾಧನಗಳ ಕೊರತೆ ಮತ್ತು ಮನೆಯಲ್ಲಿ ಬೆಂಬಲದ ವಾತಾವರಣ ಇಲ್ಲದ ಕಾರಣ ಕೆಲವೇ ಕೆಲವು ಮಕ್ಕಳಿಗೆ ಕಲಿಕೆಯ ಅವಕಾಶ ದೊರಕಿತ್ತು. ಕೆಲವು ಸಂದರ್ಭಗಳಲ್ಲಿ ಮಕ್ಕಳ ಕೈಯಲ್ಲಿ ಸಾಧನಗಳು ಇದ್ದರೂ ಕೂಡಾ, ಆನ್‌ಲೈನ್ ಕಲಿಕೆ ಮತ್ತು ಕಲಿಕೆಗೆ ಅತ್ಯಗತ್ಯವಾಗಿರುವ ಸಾಮಾಜಿಕ ಒಡನಾಟ ಇಲ್ಲದಿದ್ದುದು ದೊಡ್ಡ ಕಂದಕವಾಗಿ ಪರಿಣಮಿಸಿತು. ಶಿಕ್ಷಕರು ನೀಡಿರುವ ಪ್ರತಿಕ್ರಿಯೆಯು ಈ ಬಗೆಯಲ್ಲಿ ಉಂಟಾಗಿರುವ ಹಾನಿಯ ಕುರಿತು ಅವರ ಕಾಳಜಿಯನ್ನು ಹೊರಹಾಕಿದೆಯಲ್ಲದೆ ಶಾಲೆಗಳು ಮತ್ತೆ ಪುನರಾರಂಭಗೊಂಡಾಗ, ನಷ್ಟವಾದ ಕಲಿಕೆಯನ್ನು ಮತ್ತೆ ಸರಿದೂಗಿಸುವುದಕ್ಕಾಗಿ ಗಮನಾರ್ಹ ಮತ್ತು ವ್ಯವಸ್ಥಿತ ಕೆಲಸವನ್ನು ಮಾಡಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದೆ.

### 1. ಶಾಲೆಗಳನ್ನು ಮುಚ್ಚಿದ್ದ ಕಾರಣ ಪ್ರಾಥಮಿಕ ಶಾಲಾ ಮಕ್ಕಳ ಮೇಲೆ ಉಂಟಾಗಿರುವ ಗಂಭೀರ ಪರಿಣಾಮವನ್ನು ಗುರುತಿಸಬೇಕಾಗಿದೆ

ಶಿಕ್ಷಕರು ನೀಡಿರುವ ಪ್ರತಿಕ್ರಿಯೆಯು, 2020-21ರ ಶೈಕ್ಷಣಿಕ ವರ್ಷದಲ್ಲಿ ನಿಗದಿತ ಪಠ್ಯಕ್ರಮವನ್ನು ಪೂರ್ಣಗೊಳಿಸಲು ಯಾವುದೇ ಶಿಕ್ಷಕನಿಗೆ ಸಾಧ್ಯವಾಗಿಲ್ಲ ಎಂಬುದನ್ನು ಬಹಿರಂಗಪಡಿಸಿದೆ. ಶಾಲೆಗಳನ್ನು ಮುಚ್ಚಿದ್ದ ಸಂದರ್ಭದಲ್ಲಿ ಮಕ್ಕಳ ಜೊತೆಗೆ ಸಂವಾದವನ್ನು ಮುಂದುವರಿಸಿದ್ದ, ಉದ್ದೇಶಪೂರ್ವಕವಾಗಿ ಆಯ್ದ ಮಾದರಿ ಶಿಕ್ಷಕರ ವರ್ಗವೂ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಅಚ್ಚರಿಯ ವಿಷಯವಾಗಿದೆ.

ಶಾಲೆಗಳು ತೆರೆದಿದ್ದರೆ ಹಾಗೂ ನಿರಂತರ ತರಗತಿಗಳು ನಡೆಯುತ್ತಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಗಳಿಸಿರಬಹುದಾಗಿದ್ದ ಕಲಿಕೆಯ ಮಟ್ಟದಲ್ಲಿ ನಷ್ಟ ಉಂಟಾಗಿದೆ. ಇದಕ್ಕಿಂತಲೂ ಉಂಟಾಗಿರುವ ಹೆಚ್ಚಿನ ಸಮಸ್ಯೆಯೆಂದರೆ, ಅರ್ಥ ಗ್ರಹಿಕೆಯೊಂದಿಗೆ ಓದುವುದು, ಕೂಡಿಸುವುದು ಮತ್ತು ಗುಣಿಸುವುದು ಇತ್ಯಾದಿ ಮೂಲ ಸಾಮರ್ಥ್ಯಗಳು ಸೇರಿದಂತೆ ತಮಗೆ ತಿಳಿದಿದ್ದ ಅನೇಕ ವಿಷಯಗಳನ್ನು ಈ ಮಕ್ಕಳು ಶಾಲೆ ಸ್ಥಗಿತಗೊಂಡ ವೇಳೆ ಮರೆತು ಬಿಟ್ಟಿದ್ದಾರೆ. ಈ ಮೂಲ ಸಾಮರ್ಥ್ಯಗಳು ಮುಂದಿನ ಕಲಿಕೆಗೆ ಆಧಾರವೆನಿಸಿವೆ. ಅವುಗಳ ನಷ್ಟವು ಇನ್ನೂ ಸಂಕೀರ್ಣವೆನಿಸಿದ ಸಾಮರ್ಥ್ಯಗಳ ಕಲಿಕೆಗೆ ತೊಡಕಾಗುವುದಲ್ಲದೆ ವಿವಿಧ ವಿಷಯಗಳ ಪರಿಕಲ್ಪನಾತ್ಮಕ ಗ್ರಹಿಕೆಯ ಮೇಲೂ ಪರಿಣಾಮ ಬೀರುತ್ತದೆ.[2,3]

2 Oxfam India. (2020). Status report – government and private schools during COVID-19. https://www.oxfamindia.org/knowledgehub/oxfaminaction/status-report-government-and-private-schools-during-covid-19

3 Azim Premji Foundation. (2020). *The myths of online education.* https://azimpremjiuniversity.edu.in/field-studies-in-education/myths-of-online-education

ಕ್ಷೇತ್ರ ಅಧ್ಯಯನದಿಂದ ಕೇಳಿಬಂದ ಧ್ವನಿಗಳು

'ಶಾಲೆಗಳನ್ನು ಮುಚ್ಚಿದ್ದ ಕಾರಣ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳ ಮೇಲೆ ಸಾಕಷ್ಟು ಪ್ರಭಾವ ಉಂಟಾಗಿದೆ. ತಾವು ಕಲಿತದ್ದನ್ನು ಮಕ್ಕಳು ಮರೆತಿದ್ದಾರೆ. ಆದರೆ ಅವರಿಗೆ ಉನ್ನತ ತರಗತಿಗಳಿಗೆ ಭಡ್ತಿ ನೀಡಲಾಗಿದೆ. ಒಮ್ಮೆಲೇ ಉನ್ನತ ತರಗತಿಗಳ ಪಠ್ಯಕ್ರಮಕ್ಕೆ ಹೊಂದಿಕೊಳ್ಳುವುದು ಮಕ್ಕಳ ಪಾಲಿಗೆ ಕಷ್ಟಕರವೆನಿಸಲಿದೆ. ತರಗತಿ 5ರಲ್ಲಿರುವ ಮಕ್ಕಳು ಸರಳವಾದ ವಾಕ್ಯಗಳನ್ನು ಓದಲು ಸಹ ಹೆಣಗಾಡುತ್ತಿರುವುದು ಬೇಸರದ ಸಂಗತಿ.' **(ಶಿಕ್ಷಕರು, ಕರ್ನಾಟಕ)**

'ಶಾಲೆಗೆ ಬಾರದೆಯೇ ತರಗತಿ 1ರ ವಿದ್ಯಾರ್ಥಿಗಳಿಗೆ ಈಗ ತರಗತಿ 3ಕ್ಕೆ ಭಡ್ತಿ ನೀಡಲಾಗಿದೆ. ಮಕ್ಕಳು ಶಾಲೆಗೆ ಹಿಂದಿರುಗಿದಾಗ, ಮತ್ತೆ ತಮ್ಮ ದಿನಚರಿಗೆ ಹೊಂದಿಕೊಳ್ಳಲು ಮೂರು ತಿಂಗಳುಗಳು ಬೇಕಾಗುತ್ತದೆ. ಈಗ ನಾವು ಅವರಿಗೆ ತರಗತಿ 3ರ ಪಠ್ಯಕ್ರಮವನ್ನು ಕಲಿಸಬೇಕು. ಒಂದು ಪೆನ್ಸಿಲ್ ಅನ್ನು ಸಹ ಸರಿಯಾಗಿ ಹಿಡಿಯಲು ಬಾರದ ಮಗುವು ತರಗತಿ 3ರ ಕಲಿಕಾ ಫಲಿತಗಳನ್ನು ಗಳಿಸುವುದಾದರೂ ಹೇಗೆ?" **(ಶಿಕ್ಷಕರು, ರಾಜಸ್ಥಾನ)**

ಇದು, 'ಕೊರೊನಾ ಸಾಂಕ್ರಾಮಿಕದ ಅವಧಿಯಲ್ಲಿ ಮಕ್ಕಳ ಕಲಿಕೆಯಲ್ಲಾದ ನಷ್ಟ'ವನ್ನು ಕುರಿತ ಅಧ್ಯಯನದಿಂದ ಪಡೆದ ಒಳನೋಟಗಳನ್ನು ಮತ್ತಷ್ಟು ಪುಷ್ಟೀಕರಿಸುತ್ತದೆ.[4] ಒಟ್ಟು 5 ರಾಜ್ಯಗಳ 44 ಜಿಲ್ಲೆಗಳಲ್ಲಿ 1137 ಶಾಲೆಗಳ 16,067 ಪ್ರಾಥಮಿಕ ಶಾಲಾ ಮಕ್ಕಳೊಂದಿಗೆ 2021ರ ಜನವರಿ ತಿಂಗಳಿನಲ್ಲಿ ನಡೆಸಿದ ಆ ಅಧ್ಯಯನವು, ಎಲ್ಲಾ ತರಗತಿಗಳಲ್ಲಿ, ಭಾಷೆ ಮತ್ತು ಗಣಿತದಲ್ಲಿ, ತಾವು ಹಿಂದಿನ ವರ್ಷದಲ್ಲಿ ಕಲಿತಿದ್ದ ಕನಿಷ್ಠ ಒಂದು ನಿರ್ದಿಷ್ಟ ಮೂಲ ಸಾಮರ್ಥ್ಯವನ್ನು ಕ್ರಮವಾಗಿ ಸರಾಸರಿ 92% ಮತ್ತು 82% ಮಕ್ಕಳು ಕಳೆದುಕೊಂಡಿರುವುದನ್ನು ಬಹಿರಂಗಪಡಿಸಿದೆ. ಈ ಕಲಿಕಾ ನಷ್ಟವನ್ನು, ಶಾಲೆಗಳನ್ನು ಮತ್ತೆ ತೆರೆಯುವುದರ ಕುರಿತ ಇತ್ತೀಚಿನ ಸಂಸದೀಯ ಸ್ಥಾಯಿ ಸಮಿತಿಯೂ ಕೂಡ ದೃಢೀಕರಿಸಿದೆ (ವರದಿ 328).[5]

## 2. 'ಏನನ್ನು' ಮತ್ತು 'ಹೇಗೆ' ಕಲಿಸಬೇಕು ಎಂದು ನಿರ್ಧರಿಸುವುದಕ್ಕಾಗಿ ಮೌಲ್ಯಮಾಪನ

ಅಗಾಧ ಪ್ರಮಾಣದಲ್ಲಿ, ಅಂದರೆ 96% ಶಿಕ್ಷಕರು, ಶಾಲೆ ಪುನರಾರಂಭಗೊಂಡಾಗ ಕೇವಲ ಪ್ರಸ್ತುತ ಶೈಕ್ಷಣಿಕ ವರ್ಷದ (2021-22) ಮೇಲೆ ಗಮನಹರಿಸುವುದರ ಬದಲಾಗಿ ಹಿಂದಿನ ವರ್ಷಗಳಲ್ಲಿ (2019-20 ಮತ್ತು 2020-21) ಮಕ್ಕಳು ಗಳಿಸಿರಬೇಕಿದ್ದ ಸಾಮರ್ಥ್ಯದ ಮೌಲ್ಯಮಾಪನ ಮಾಡಬೇಕಾದ ಅಗತ್ಯವಿದೆ ಎಂಬ ಅರಿವನ್ನು ಹೊಂದಿದ್ದಾರೆ.

ವಿವಿಧ ವಿಷಯಗಳಲ್ಲಿ ತರಗತಿ ಆಧರಿತ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವ ಬದಲಾಗಿ ಭಾಷೆ ಮತ್ತು ಗಣಿತದಲ್ಲಿ ಪ್ರಾಥಮಿಕ ಶಾಲಾ ಮಕ್ಕಳು ಹೊಂದಿರುವ ಮೂಲ ಸಾಮರ್ಥ್ಯಗಳ ಮೌಲ್ಯಮಾಪನ ಮಾಡಬೇಕು ಎಂದು ಬಹುಪಾಲು (56%) ಶಿಕ್ಷಕರು ಅಭಿಪ್ರಾಯಪಟ್ಟಿದ್ದು, ಮಕ್ಕಳ ಮೂಲ ಸಾಮರ್ಥ್ಯದಲ್ಲಿ ನಷ್ಟ ಉಂಟಾಗಿರುವುದು ಶಿಕ್ಷಕರ ಅರಿವಿಗೆ ಬಂದಿರುವುದನ್ನು ತೋರಿಸುತ್ತದೆ.



**ಶಾಲೆಗಳು ಮತ್ತೆ ಪುನರಾರಂಭಗೊಂಡಾಗ, ಹಿಂದಿನ ತರಗತಿಗಳಲ್ಲಿ ಮಕ್ಕಳು ಗಳಿಸಿದ ಸಾಮರ್ಥ್ಯದ ಮೌಲ್ಯಮಾಪನ ಮಾಡಬೇಕು ಎಂಬುದಾಗಿ 96% ಶಿಕ್ಷಕರು ಆಗ್ರಹಿಸಿದ್ದಾರೆ.**

ಕ್ಷೇತ್ರ ಅಧ್ಯಯನದಿಂದ ಕೇಳಿಬಂದ ಧ್ವನಿಗಳು

'ಮಕ್ಕಳು, ತಮ್ಮ ತರಗತಿಯ ಕಲಿಕಾ ಫಲಿತಕ್ಕೆ ಸಂಬಂಧಿಸಿದಂತೆ ಅಳತೆ, ಆಕಾರ, ಸ್ಥಾನ ಬೆಲೆ, ಸಂಖ್ಯಾಜ್ಞಾನ, ಮತ್ತು ಗಣಿತದ ಮೂಲಕ್ರಿಯೆಗಳು ಮುಂತಾದ ವಿಚಾರಗಳಿಗೆ ಸಂಬಂಧಿಸಿದ ಪರಿಕಲ್ಪನೆಗಳನ್ನು ತಿಳಿದಿರಬೇಕು. ಹೀಗಾಗಿ, ಮುಂದಿನ ಹಂತದ ಸಾಮರ್ಥ್ಯಗಳನ್ನು ಗಳಿಸಲು ಬೇಕಾಗುವ ಸಾಮರ್ಥ್ಯವನ್ನು ಮಕ್ಕಳು ಗಳಿಸಿಕೊಂಡಿದ್ದಾರೆ ಎಂಬುದನ್ನು ಶಿಕ್ಷಕರು ಮೊದಲಿಗೆ ಖಾತರಿಪಡಿಸಿಕೊಳ್ಳಬೇಕು. ಉದಾಹರಣೆಗೆ, ಮಕ್ಕಳು ಸಂಖ್ಯೆಗಳು ಮತ್ತು ಮೂಲಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿಲ್ಲದೆ ಇದ್ದಲ್ಲಿ ಮುಂದಿನ ತರಗತಿಯ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ಸಾಧ್ಯವಾಗುವುದಿಲ್ಲ.' **(ಶಿಕ್ಷಕರು, ರಾಜಸ್ಥಾನ)**

4 Azim Premji Foundation. (2021). Loss of learning during the pandemic. https://azimpremjiuniversity.edu.in/field-studies-in-education/loss-of-learning-during-the-pandemic

5 Parliamentary Standing Committee On Education, Women, Children, Youth and Sports. (2021). Plans for Bridging the Learning Gap caused due to School Lockdown as well as Review of online and offline Instructions and Examinations and Plans for re-opening of Schools. https://rajyasabha.nic.in/rsnew/Committee_site/Committee_File/RertFile/16/144/328_2021_8_15.pdf

ಮಕ್ಕಳು ಕಳೆದುಕೊಂಡಿರುವ ಕಲಿಕಾ ನಷ್ಟವನ್ನು ಮತ್ತೆ ಗಳಿಸಿಕೊಳ್ಳಲು ಮತ್ತು ಆ ತರಗತಿಯ ನಿರೀಕ್ಷಿತ ಮಟ್ಟಕ್ಕೆ ಅವರನ್ನು ತರಲು ಯೋಜನೆ ರೂಪಿಸುವುದಕ್ಕಾಗಿ ಈ ಮೌಲ್ಯಮಾಪನವು ಆಧಾರವಾಗಬೇಕು ಎಂದು ಶಿಕ್ಷಕರು ಹೇಳಿದ್ದಾರೆ. ಅವರ ಕಲಿಕೆಯ ಮೇಲೆ ನಿಗಾ ಇಡುವುದಕ್ಕಾಗಿ ನಿರಂತರ ಮತ್ತು ಮುಂದುವರಿಯುತ್ತಿರುವ ಮೌಲ್ಯಮಾಪನದ ಅಗತ್ಯವಿದೆ.

## 3. ಮೂಲ ಸಾಮರ್ಥ್ಯಗಳ ಮೇಲೆ ಗಮನವನ್ನು ಕೇಂದ್ರೀಕರಿಸುವುದಕ್ಕಾಗಿ ಪಠ್ಯಕ್ರಮವನ್ನು ಪುನರ್ ವಿನ್ಯಾಸಗೊಳಿಸುವುದು

ಬಹುಪಾಲು ಶಿಕ್ಷಕರು (96%), ಕಲಿಕಾ ನಷ್ಟದ ವಾಸ್ತವತೆಯನ್ನು ಸರಿದೂಗಿಸುವುದಕ್ಕಾಗಿ ಪಠ್ಯಕ್ರಮದಲ್ಲಿ ಬದಲಾವಣೆ ಮಾಡಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ದೈನಂದಿನ ವೇಳಾಪಟ್ಟಿಯಲ್ಲಿ ಮೂಲ ಸಾಕ್ಷರತೆ ಮತ್ತು ಸಂಖ್ಯಾಜ್ಞಾನಕ್ಕೆ ಗಮನ ನೀಡಬೇಕು ಎಂದು 61% ಶಿಕ್ಷಕರು ಹೇಳಿದ್ದಾರೆ. ಸುಮಾರು 74%ಶಿಕ್ಷಕರು, ಪಠ್ಯಕ್ರಮದ ಭಾರವನ್ನು ತಗ್ಗಿಸಬೇಕು ಎಂದು ಹೇಳಿದ್ದಾರೆ. ಅಲ್ಲದೆ ಹೆಚ್ಚಿನ ಪ್ರಮಾಣದಲ್ಲಿ ನಷ್ಟಕ್ಕೆ ಒಳಗಾಗಿರುವ ಮೂಲ ಸಾಮರ್ಥ್ಯಗಳ ಮೇಲಷ್ಟೇ ಗಮನ ಹರಿಸುವುದಕ್ಕಾಗಿ ಇವುಗಳನ್ನು ಪಠ್ಯಕ್ರಮದೊಳಗೆ ಸೂಕ್ತ ರೀತಿಯಲ್ಲಿ ಅಣಿಗೊಳಿಸಬೇಕು ಎಂದು ಇವರು ಹೇಳಿದ್ದಾರೆ.



**96%** ಶಿಕ್ಷಕರು ಪಠ್ಯಕ್ರಮದಲ್ಲಿ ಬದಲಾವಣೆ ತರಬೇಕು ಎಂದು ಹೇಳಿದ್ದಾರೆ.

ಕ್ಷೇತ್ರ ಅಧ್ಯಯನದಿಂದ ಕೇಳಿಬಂದ ಧ್ವನಿಗಳು

*'ಈ ವರ್ಷದಲ್ಲಿ ಪಠ್ಯಕ್ರಮದ ಪ್ರಮಾಣವನ್ನು ತಗ್ಗಿಸಬೇಕು ಮತ್ತು ಮೂಲ ಸಾಮರ್ಥ್ಯಗಳಿಗೆ ಆದ್ಯತೆ ನೀಡಬೇಕು. ಮಕ್ಕಳು ಮೂಲ ಸಾಮರ್ಥ್ಯವನ್ನು ಗಳಿಸುವುದಕ್ಕೆ ಮಾಡಬೇಕಾದ ಕೆಲಸವು ಸಮರೋಪಾದಿಯಲ್ಲಿ ನಡೆಯಬೇಕು ಮತ್ತು ಇದನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು.'* (ಶಿಕ್ಷಕರು, ರಾಜಸ್ಥಾನ)

*'ತಾವು ಭಡ್ತಿ ಪಡೆದಿರುವ ಪ್ರಸ್ತುತ ತರಗತಿಯ ಅಧ್ಯಯನವನ್ನು ಮುಂದುವರಿಸಲು ಮಕ್ಕಳನ್ನು ಸಿದ್ಧಗೊಳಿಸಲು ಕೂಡುವುದು, ಕಳೆಯುವುದು ಮುಂತಾದ ಮೂಲ ಪರಿಕಲ್ಪನೆಗಳಿಗೆ ನಾವು ಗಮನ ನೀಡಬೇಕು. ನಾವು ಈ ಶೈಕ್ಷಣಿಕ ವರ್ಷವನ್ನು ವಿಸ್ತರಿಸಬಹುದು ಹಾಗೂ ಕಳೆದ 18-20 ತಿಂಗಳುಗಳಲ್ಲಿ ಕಳೆದುಕೊಂಡಿರುವುದನ್ನು ಮರುಗಳಿಸಲು ಹೆಚ್ಚುವರಿ ಪಾಠದ ಅವಧಿಯನ್ನು ನಿರ್ವಹಿಸಬಹುದು.* (ಶಿಕ್ಷಕರು, ಉತ್ತರಾಖಂಡ)

## 4. ಕಲಿಕೆಯನ್ನು ಸರಿದೂಗಿಸುವುದಕ್ಕಾಗಿ ಬೋಧನಾ-ಕಲಿಕೆ ಪ್ರಕ್ರಿಯೆ ಮತ್ತು ಸಾಮಗ್ರಿಗಳನ್ನು ಮರುಹೊಂದಿಸುವುದು

ತಮ್ಮ ವಿದ್ಯಾರ್ಥಿಗಳಲ್ಲಿ ಬೇರೆ ಬೇರೆ ಮಟ್ಟದ ಕಲಿಕಾ ನಷ್ಟ ಉಂಟಾಗಿದ್ದು, ಶಾಲೆ ಮತ್ತೆ ಪುನರಾರಂಭಗೊಂಡಾಗ ಅದನ್ನು ತಾವು ಸರಿಪಡಿಸಬೇಕಾಗುತ್ತದೆ ಎಂಬುದನ್ನು ಶಿಕ್ಷಕರು ತಿಳಿದುಕೊಂಡಿದ್ದಾರೆ. ಶಾಲೆಗಳನ್ನು ಮತ್ತೆ ತೆರೆದಾಗ ಮಾಡಿಕೊಳ್ಳಬೇಕಿರುವ ಬೋಧನಾ ವಿಧಾನದಲ್ಲಿನ ಬದಲಾವಣೆಗಳ ಕುರಿತು ಮಾತನಾಡಿರುವ 56% ಶಿಕ್ಷಕರು, ಮಕ್ಕಳು ಕಲಿಕಾ ನಷ್ಟವನ್ನು ಮರುಗಳಿಸುವುದಕ್ಕಾಗಿ ಪರಿಹಾರ ಬೋಧನೆಗೆ ಒತ್ತು ನೀಡಿರುವುದರ ಜೊತೆಗೆ ಮಕ್ಕಳು ಕಳೆದುಕೊಂಡ ಸಾಮರ್ಥ್ಯಗಳ ಮೇಲೆ ಆರಂಭದ ದಿನಗಳಲ್ಲಿ ಬೋಧನೆ-ಕಲಿಕೆಯು ಗಮನ ನೀಡಬೇಕು ಎಂದಿದ್ದಾರೆ.

ತರಗತಿಕೋಣೆಯ ಕಲಿಕಾ ಮಟ್ಟಗಳ ವೈವಿಧ್ಯತೆಗೆ ಒತ್ತು ನೀಡುವುದಕ್ಕಾಗಿ ಮಾಡಿಕೊಳ್ಳಬೇಕಿರುವ ಬೋಧನಾ ವಿಧಾನದಲ್ಲಿನ ಬದಲಾವಣೆಗಳ ಅಗತ್ಯತೆಯನ್ನು 57% ರಷ್ಟು ಶಿಕ್ಷಕರು ಅನುಮೋದಿಸಿದ್ದಾರೆ. ಬಹು-ವರ್ಗ ಮತ್ತು ಬಹು-ಹಂತದ ಬೋಧನೆಯು ಇಂತಹ ಒಂದು ವಿಧಾನವಾಗಿದ್ದು, ಶಿಕ್ಷಕರ ಒಟ್ಟಾರೆ ಮಾರ್ಗದರ್ಶನದಲ್ಲಿ ತಮ್ಮ ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಮಕ್ಕಳು ಸ್ವತಂತ್ರವಾಗಿ ಅಥವಾ ಗುಂಪುಗಳಲ್ಲಿ ಕಾರ್ಯ ನಿರ್ವಹಿಸುತ್ತಾರೆ.



**ಆರಂಭಿಕ ಬೋಧನಾ-ಕಲಿಕೆಯು ಕಲಿಕಾ ನಷ್ಟದ ಮರುಗಳಿಕೆಯ ಮೇಲೆ ಮಾತ್ರವೇ ಗಮನ ಹರಿಸಬೇಕು ಎಂದು 56% ಶಿಕ್ಷಕರು ಭಾವಿಸಿದ್ದಾರೆ.**

**ಬೋಧನಾ-ಕಲಿಕೆ ಪ್ರಕ್ರಿಯೆಗೆ ಬದಲಾವಣೆ ಮಾಡುವ ಅಗತ್ಯವಿದೆ ಎಂದು 57% ಶಿಕ್ಷಕರು ಹೇಳಿದ್ದಾರೆ.**

**ಮಕ್ಕಳ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ವೈವಿಧ್ಯಮಯ ಬೋಧನಾ-ಕಲಿಕೆ ಸಾಮಗ್ರಿಗಳ ಅಗತ್ಯವಿದೆ ಎಂದು 48% ಶಿಕ್ಷಕರು ಹೇಳಿದ್ದಾರೆ.**

ಸುಮಾರು 48% ಶಿಕ್ಷಕರು, ತಮ್ಮ ಮಕ್ಕಳ ವೈವಿಧ್ಯಮಯ ಕಲಿಕಾ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ, ತರಗತಿಗೆ ಅನುಗುಣವಾದ ಪಠ್ಯಪುಸ್ತಕಗಳಿಗಿಂತಲೂ ವೈವಿಧ್ಯಮಯ ಬೋಧನಾ-ಕಲಿಕೆ ಸಾಮಗ್ರಿಗಳ ಅಗತ್ಯತೆಯನ್ನು ಒತ್ತಿ ಹೇಳಿದ್ದಾರೆ. ಉದಾಹರಣೆಗೆ, ಕಾರ್ಯಹಾಳೆಗಳನ್ನೊಳಗೊಂಡ ವರ್ಕ್‌ಬುಕ್‌ಗಳು ಮಕ್ಕಳಿಗೆ ವ್ಯವಸ್ಥಿತ ಮತ್ತು ಆಸಕ್ತಿದಾಯಕ ರೀತಿಯಲ್ಲಿ ಕಲಿಯಲು ಅನುಕೂಲವಾಗುವುದರಿಂದ ಪ್ರಾಥಮಿಕ ಶಾಲೆಗಳ ಎಲ್ಲಾ ತರಗತಿಗಳಲ್ಲಿ ಇವು ತುಂಬಾ ಉಪಯುಕ್ತ ಎಂದು ಶಿಕ್ಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕಾರ್ಯಹಾಳೆಗಳು ಸಾಮಾನ್ಯವಾಗಿ ಮಕ್ಕಳು ಸ್ವತಂತ್ರವಾಗಿ ಮಾಡಬಹುದಾದ ಹಾಗೂ ಆಸಕ್ತಿದಾಯಕ ಚಿತ್ರಗಳನ್ನು ಹೊಂದಿರುವ ಸರಳ ಅಭ್ಯಾಸಗಳನ್ನು ಹೊಂದಿರುತ್ತವೆ. ಈ ಕಾರ್ಯಹಾಳೆಗಳನ್ನು ಶ್ರೇಣೀಕರಿಸಬಹುದು. ಅಂದರೆ ಮೂಲ ಸಾಮರ್ಥ್ಯದಿಂದ ಪ್ರಾರಂಭಿಸಿ ಮೇಲಿನ ಹಂತದ ಸಾಮರ್ಥ್ಯಗಳತ್ತ ಮುಂದುವರಿಯಬಹುದು. ವಿವಿಧ ಸಾಮರ್ಥ್ಯಗಳನ್ನು ಹೊಂದಿದ ವಿದ್ಯಾರ್ಥಿಗಳು ಇರುವಲ್ಲಿ ಇದು ಉಪಯುಕ್ತ. ಇಡೀ ತರಗತಿಗೆ ಸಾಮಾನ್ಯ ಯೋಜನೆಯೊಂದನ್ನು ರೂಪಿಸಿ ಎಲ್ಲಾ ವಿದ್ಯಾರ್ಥಿಗಳಿಗೆ ಒಂದೇ ರೀತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳಲು ಅನುವು ಮಾಡಿಕೊಡಬಹುದು. ಇಂತಹ ವಿಧಾನವು ಕಲಿಕೆಯನ್ನು ಅನುಕೂಲಿಸುವುದಲ್ಲದೆ ಪ್ರತಿ ವಿದ್ಯಾರ್ಥಿ ಸಾಧಿಸುವ ಪ್ರಗತಿಯ ಮೌಲ್ಯಮಾಪನ ಮಾಡಲು ಶಿಕ್ಷಕರಿಗೆ ಸಹಾಯ ಮಾಡುತ್ತದೆ.

ಕ್ಷೇತ್ರ ಅಧ್ಯಯನದಿಂದ ಕೇಳಿಬಂದ ಧ್ವನಿಗಳು

'ಮಕ್ಕಳ ಪರಿಸರಕ್ಕೆ ಹೊಂದಿಕೊಂಡಂತೆ ಹೆಚ್ಚು ಹೆಚ್ಚು ಸಂದರ್ಭೋಚಿತ ಚಟುವಟಿಕೆಗಳನ್ನು ಆಯೋಜಿಸುವ ಅಗತ್ಯವಿದೆ. ಏಕೆಂದರೆ ಇವು ಶಾಲಾ ಕಲಿಕೆಯನ್ನು ತಮ್ಮ ಮನೆಗಳು ಮತ್ತು ಸಮುದಾಯಗಳೊಂದಿಗೆ ಸಂಬಂಧೀಕರಿಸಿಕೊಳ್ಳಲು ಮಕ್ಕಳಿಗೆ ಅನುವು ಮಾಡಿಕೊಡುತ್ತವೆ.' (ಶಿಕ್ಷಕರು, ಮಧ್ಯ ಪ್ರದೇಶ)

'ಒಂದೇ ತರಗತಿಯ ಮಕ್ಕಳ ಕಲಿಕಾ ಮಟ್ಟದಲ್ಲಿ ಸಾಕಷ್ಟು ವ್ಯತ್ಯಾಸಗಳು ಕಂಡುಬರಲಿವೆ. ನಾವು ತರಗತಿ 1 ಮತ್ತು 2 ಹಾಗೂ ತರಗತಿ 3 ರಿಂದ 5ರ ತನಕ ಸಂಯೋಜಿಸಿ ಇವುಗಳನ್ನು ಒಂದೊಂದು ಪ್ರತ್ಯೇಕ ಗುಂಪಾಗಿ ಪರಿಗಣಿಸಬಹುದು.' (ಶಿಕ್ಷಕರು, ಉತ್ತರಾಖಂಡ)

'ಪುಸ್ತಕಗಳು ಮಕ್ಕಳನ್ನು ಆಕರ್ಷಿಸುತ್ತವೆ - ಅವರು ಪುಸ್ತಕ ಓದುವುದನ್ನು ಇಷ್ಟಪಡುತ್ತಾರೆ ಮತ್ತು ಪುಸ್ತಕಗಳಲ್ಲಿರುವ ಚಿತ್ರಗಳನ್ನು ನೋಡುತ್ತಾರೆ. ನಾನು ಶಾಲೆಯಲ್ಲಿರುವ ವಾಚನಾಲಯವನ್ನು ಬಳಸುತ್ತೇನೆ ಮತ್ತು ಸಮುದಾಯದ ಮಟ್ಟದಲ್ಲಿ ಒಂದನ್ನು ಸ್ಥಾಪಿಸುತ್ತೇನೆ. ಇದರಿಂದಾಗಿ ಕನಿಷ್ಠ ಪಾಲು ನಾವು ಮಕ್ಕಳನ್ನು ಓದುವಿಕೆಯಲ್ಲಾದರೂ ತೊಡಗಿಸಲು ನಮಗೆ ಸಾಧ್ಯವಾಗುತ್ತದೆ. ಬೋಧನಾ-ಕಲಿಕೆಗೆ ನೆರವು ನೀಡುವುದಕ್ಕಾಗಿ ವಿವಿಧ ಸಾಮರ್ಥ್ಯಗಳಿಗೆ ಸರಿಹೊಂದುವ ಪುಸ್ತಕಗಳ ಸಂಗ್ರಹದ ಕಟ್ಟುಗಳನ್ನು ನಾವು ರಚಿಸಬಹುದು ಹಾಗೂ ಮುಂದೆ ಸಾಗಿದಂತೆ ತಮ್ಮಲ್ಲಿರುವ ಪುಸ್ತಕದ ಸಂಗ್ರಹವನ್ನು ಅವರು ಇತರ ಸಂಗ್ರಹದೊಂದಿಗೆ ವಿನಿಮಯ ಮಾಡಿಕೊಳ್ಳಬಹುದು.' (ಶಿಕ್ಷಕರು, ರಾಜಸ್ಥಾನ)

## 5. ಶಿಕ್ಷಕರನ್ನು ಸಿದ್ಧಗೊಳಿಸುವ ಕಾರ್ಯವಿಧಾನಗಳು

ಬದಲಾಗಿರುವ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕಾಗಿ ಪರಿಚಯಾತ್ಮಕ ತರಬೇತಿ ಮತ್ತು ಬೆಂಬಲದ ಅಗತ್ಯವಿದೆ ಎಂಬುದಾಗಿ ಶಿಕ್ಷಕರು ಹೇಳಿದ್ದಾರೆ. ಒಟ್ಟು 66% ಶಿಕ್ಷಕರು ತರಬೇತಿಯ (ಮೌಲ್ಯಮಾಪನ ಪ್ರಕ್ರಿಯೆ ಮತ್ತು ಪರಿಷ್ಕೃತ ಪಠ್ಯಕ್ರಮವನ್ನು ಅಳವಡಿಸುವುದಕ್ಕೆ ನೆರವಾಗುವುದೂ ಸೇರಿದಂತೆ) ಅಗತ್ಯವಿದೆ ಎಂದು ಹೇಳಿದರೆ, 68% ಶಿಕ್ಷಕರು, ಈ ಪರಿಸ್ಥಿತಿಯನ್ನು ನಿಭಾಯಿಸಲು ನೆರವು ನೀಡಬಲ್ಲ ವರ್ಕ್‌ಬುಕ್‌ನಂತಹ ಬೋಧನಾ-ಕಲಿಕೆ ಪರಿಕರಗಳ ನೆರವು ಬೇಕೆಂದು ಹೇಳಿದ್ದಾರೆ.



**ಒಟ್ಟು 68% ಶಿಕ್ಷಕರು ಬೋಧನಾ-ಕಲಿಕೆ ಸಾಮಗ್ರಿಗಳ ನೆರವಿನ ಅಗತ್ಯವಿದೆ ಎಂದು ಹೇಳಿದ್ದಾರೆ.**

ಮುಂದೆ ತಾವು ಮಾಡಬೇಕಾದ ಕೆಲಸಗಳಿಗೆ ವ್ಯಯಿಸಬೇಕಾದ ಸಮಯವನ್ನು ಕುರಿತು ಕೂಡ ಶಿಕ್ಷಕರು ಆತಂಕದಲ್ಲಿದ್ದಾರೆ. ಮುಖ್ಯವಾಗಿ ತಮ್ಮ ಮೇಲೆ ಹೊರಿಸಬಹುದಾದ ಬೋಧಕೇತರ ಕೆಲಸಗಳ ಕುರಿತು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಕ್ಷೇತ್ರ ಅಧ್ಯಯನದಿಂದ ಕೇಳಿಬಂದ ಧ್ವನಿಗಳು

ರಾಜಸ್ಥಾನದ ಶಿಕ್ಷಕರು, ತಾವು ಸಾಕಷ್ಟು ಸಮಯ ಔಪಚಾರಿಕ ಬೋಧನಾ-ಕಲಿಕೆ ಪ್ರಕ್ರಿಯೆಯಿಂದ ದೂರವಿದ್ದುದಾಗಿ ಹೇಳಿದ್ದಾರೆ. ಅಲ್ಲದೆ ಎಲ್ಲರನ್ನೂ ಕಾಡುತ್ತಿರುವ 'ಹೇಗೆ ಮತ್ತು ಎಲ್ಲಿ ಪ್ರಾರಂಭಿಸುವುದು' ಎನ್ನುವ ಸವಾಲುಭರಿತ ಪ್ರಶ್ನೆಯನ್ನು ಹೇಗೆ ನಿಭಾಯಿಸಬಹುದು ಎಂಬುದನ್ನು ಕುರಿತು ಗೊಂದಲ ಮತ್ತು ಅಳುಕು ಹೊಂದಿರುವುದಾಗಿ ತಿಳಿಸಿದ್ದಾರೆ.

'ನಮಗೆ ಹೆಚ್ಚುವರಿ (ಬೋಧಕೇತರ) ಕೆಲಸವನ್ನು ನೀಡಬಾರದು; ಪ್ರಾಥಮಿಕ ಶಾಲಾ ಶಿಕ್ಷಕರು ಶೈಕ್ಷಣಿಕ ಕೆಲಸದ ಮೇಲೆ ಮಾತ್ರ ಗಮನ ಹರಿಸುವಂತೆ ನೋಡಿಕೊಳ್ಳಬೇಕು. ಇತ್ತೀಚೆಗೆ, ನಮ್ಮನ್ನು ಆರೋಗ್ಯ ಮತ್ತು ಲಸಿಕೆ ಸಂಬಂಧಿತ ಸಮೀಕ್ಷೆಗಳಲ್ಲಿ ತೊಡಗಿಸಿಕೊಳ್ಳಲಾಗಿತ್ತು. ಇಂತಹ ಕೆಲಸವು ಶಾಲೆಯ ಶೈಕ್ಷಣಿಕ ಪ್ರಕ್ರಿಯೆಗೆ ತಡೆಯೊಡ್ಡುತ್ತದೆ. ನಾನು ಮಕ್ಕಳಿಗೆ ನೀಡಬೇಕಾದ ಸಮಯವು ಇತರ ಕೆಲಸಗಳಿಗೆ ವ್ಯಯವಾಗುತ್ತದೆ. ಈ ಕೆಲಸವನ್ನು ಶಾಲೆಯ ಕಾರ್ಯದರ್ಶಿ ಮತ್ತು ಕಂದಾಯ ಅಧಿಕಾರಿಗೆ (ಪಟ್ವಾರಿ) ನೀಡಬೇಕು. ಆಗ ನಾವು ನಮ್ಮ ಮೂಲ ಕೆಲಸವಾದ ಬೋಧನಾ-ಕಲಿಕೆಗೆ ಹೆಚ್ಚು ಗಮನ ನೀಡಿ ಮಕ್ಕಳಲ್ಲಿ ಉತ್ತಮ ಕಲಿಕೆಗೆ ಒತ್ತು ನೀಡಬಹುದು.' (ಶಿಕ್ಷಕರು, ರಾಜಸ್ಥಾನ)

## 6. ಕಲಿಕೆಯಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳುವುದು

ಶಾಲೆಗಳು ಮತ್ತೆ ಪುನರಾರಂಭಗೊಂಡರೂ ಬೋಧನಾ-ಕಲಿಕೆ ಪ್ರಕ್ರಿಯೆಯಲ್ಲಿ ನಿರಂತರ ಅಡಚಣೆಗಳು ಉಂಟಾಗಬಹುದು ಎಂದು ಶಿಕ್ಷಕರು ಹೇಳಿದ್ದಾರೆ. ಏಕೆಂದರೆ ಕೋವಿಡ್ - 19 ನಿಯಮಾವಳಿಗಳ ಪ್ರಕಾರ ವ್ಯಕ್ತಿಗತವಾಗಿ ಹೆಚ್ಚಿನ ಮುಖಾಮುಖಿ ತರಗತಿಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದಿರಬಹುದು (ಉದಾಹರಣೆಗೆ ಮಕ್ಕಳು ಪರ್ಯಾಯ ದಿನಗಳಲ್ಲಿ ಮಾತ್ರವೇ ಶಾಲೆಗೆ ಬರುತ್ತಾರೆ), ಅಥವಾ ಆಗಿಂದಾಗ್ಗೆ ಶಾಲೆಗೆ ರಜೆಗಳಿರಬಹುದು.

ಮುಂದಿನ ತಿಂಗಳುಗಳಲ್ಲಿ ಇಂತಹ ಅನಿಶ್ಚಿತತೆಯನ್ನು ನಿರೀಕ್ಷಿಸುತ್ತಲೇ, ಶಾಲೆಗಳು ಪುನರಾರಂಭವಾಗಿ ಮತ್ತೆ ಸ್ಥಗಿತಗೊಂಡರೂ ಕಲಿಕೆಯಲ್ಲಿ ನಿರಂತರತೆಯನ್ನು ಕಾಪಾಡಬೇಕು ಎಂದು 81% ಶಿಕ್ಷಕರು ಹೇಳಿದ್ದಾರೆ. ಸ್ವಯಂಸೇವಕರು ಮತ್ತು ಶಿಕ್ಷಕರ ನಿಗಾದಲ್ಲಿ ನಡೆಯುವ ಮನೆ ಆಧರಿತ ಕಲಿಕಾ ನೆರವು ವ್ಯವಸ್ಥೆಗೆ 49% ಶಿಕ್ಷಕರು ಒತ್ತು ನೀಡಿದ್ದಾರೆ.




**ಸ್ಥಳೀಯ ಮಟ್ಟದಲ್ಲಿ ಉಂಟಾಗುವ ರೋಗ ಉಲ್ಬಣದ ಕಾರಣ ನಿರಂತರವಾಗಿ ಅಡಚಣೆಗಳು ಉಂಟಾದರೂ ಕಲಿಕೆಯಲ್ಲಿ ನಿರಂತರತೆಯನ್ನು ಕಾಪಾಡಬೇಕು ಎಂದು 81% ಶಿಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ.**

## 7. ಮಕ್ಕಳ ಸಮಾಜೋ-ಭಾವನಾತ್ಮಕ ಅಗತ್ಯತೆಗಳನ್ನು ಪೂರೈಸುವುದು

ಶಾಲೆಗಳು ಮುಚ್ಚಿದ್ದ ವೇಳೆ ಶಾಲೆ ಮತ್ತು ತಮ್ಮ ಸಹಪಾಠಿಗಳಿಂದ ಸಂಬಂಧವನ್ನು ಕಡಿದುಕೊಂಡ ಕಾರಣ ಕಲಿಕಾ ಪ್ರಕ್ರಿಯೆಯಲ್ಲಿ ಉಂಟಾದ ಅನನುಕೂಲತೆ ಮತ್ತು ತಾವು ಕಲಿತಿದ್ದುದನ್ನು ಮರೆತು ಬಿಟ್ಟಿರುವ ಕಾರಣ ಎದುರಾಗಿರುವ ಒತ್ತಡದಿಂದ ಬಹಳ ಅಥವಾ ಹೆಚ್ಚಿನ ಪ್ರಮಾಣದ ಮಕ್ಕಳಿಗೆ ಸಮಾಜೋ-ಭಾವನಾತ್ಮಕ ವಿಚಾರಗಳಿಗೆ ಸಂಬಂಧಿಸಿದಂತೆ ನೆರವು ಬೇಕಾದೀತು ಎಂದು ಸುಮಾರು 70% ಶಿಕ್ಷಕರು ಹೇಳಿದ್ದಾರೆ. ವಿವಿಧ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದ ಅನೇಕ ವಿದ್ಯಾರ್ಥಿಗಳು ಈಗ ಶಾಲೆಗೆ ಮರಳುತ್ತಿರುವ ಕಾರಣ ಹಾಗೂ ಕೌಟುಂಬಿಕ ಸನ್ನಿವೇಶದಲ್ಲಿ ಅವರು ಬದಲಾವಣೆಗಳನ್ನು

ಕಂಡಿರುವ ಕಾರಣ (ಪೋಷಕರ ಆದಾಯದಲ್ಲಿ ಕುಂಠಿತ, ಕೋವಿಡ್ - 19 ನಿಂದಾಗಿ ಪ್ರೀತಿಪಾತ್ರರ ಸಾವು, ಇತ್ಯಾದಿ) ಈ ಮಕ್ಕಳು ಸಕಾರಾತ್ಮಕತೆಯ ಕೊರತೆ ಹಾಗೂ ತಮ್ಮ ಕಲಿಕಾ ಸಾಮರ್ಥ್ಯದ ಕುರಿತ ಆತ್ಮವಿಶ್ವಾಸವನ್ನು ಕಳೆದುಕೊಂಡಿರಬಹುದು ಎಂದು ಕೆಲವು ಶಿಕ್ಷಕರು ಹೇಳಿದ್ದಾರೆ.

ಸಮೀಕ್ಷೆಗೆ ಒಳಪಡಿಸಿದವರಲ್ಲಿ, 71% ಶಿಕ್ಷಕರು, ಶಾಲಾ ಶಿಕ್ಷಣದ ಪುನರಾರಂಭದ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ನಿರಾಳತೆ ಒದಗಿಸುವುದಕ್ಕಾಗಿ ಕೈಗೊಳ್ಳುವ ನಿರ್ದಿಷ್ಟ ಚಟುವಟಿಕೆಗಳು ಮತ್ತು ಪ್ರಕ್ರಿಯೆಗಳು ಸಮಾಜೋ-ಭಾವನಾತ್ಮಕ ವಿಚಾರಗಳನ್ನು ಬಗೆಹರಿಸುವಲ್ಲಿ ದೊಡ್ಡ ಕೊಡುಗೆಯನ್ನು ನೀಡಲಿವೆ ಎಂದು ಹೇಳಿದ್ದಾರೆ. ಈ ಚಟುವಟಿಕೆಗಳ ಕೆಲವು ಉದಾಹರಣೆಗಳೆಂದರೆ, ಚರ್ಚೆ, ಚಿತ್ರಕಲೆ, ಬರಹ, ನಾಟಕ ಮತ್ತು ಅಭಿನಯ ಅಥವಾ ಅವರು ರಚಿಸುವ ಯಾವುದೇ ಕಲಾಕೃತಿ ಅಥವಾ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸುವ ಮೂಲಕ ಶಾಲೆಗಳು ಮುಚ್ಚಿದ್ದ ಸಂದರ್ಭದಲ್ಲಿ ತಮಗಾದ ಅನುಭವಗಳನ್ನು ಹಂಚಿಕೊಳ್ಳುವುದು ಇತ್ಯಾದಿ. ಇತರ ಉದಾಹರಣೆಗಳೆಂದರೆ ಸೃಜನಶೀಲತೆಯ ಕಾರ್ಯಾಗಾರ, ಕ್ರೀಡಾ ಚಟುವಟಿಕೆಗಳು ಇತ್ಯಾದಿ. ಹೆಚ್ಚಿನ ಪ್ರಮಾಣದ ಶಿಕ್ಷಕರು (53%) ಆಪ್ತ ಸಮಾಲೋಚನೆಯ ಪ್ರಾಮುಖ್ಯತೆಯನ್ನು ತಿಳಿಹೇಳಿದ್ದಾರೆ.



**ಒಟ್ಟು 71% ಶಿಕ್ಷಕರು, ಮಕ್ಕಳಿಗೆ ಸಂಬಂಧಿಸಿದ ಸಮಾಜೋ-ಭಾವನಾತ್ಮಕ ವಿಚಾರಗಳನ್ನು ಪರಿಹರಿಸಲು ನಿರ್ದಿಷ್ಟ ಚಟುವಟಿಕೆಗಳು ಮತ್ತು ಪ್ರಕ್ರಿಯೆಗಳು ನೆರವು ನೀಡುತ್ತವೆ ಎಂದು ಹೇಳಿದ್ದಾರೆ.**

ಕ್ಷೇತ್ರ ಅಧ್ಯಯನದಿಂದ ಕೇಳಿಬಂದ ಧ್ವನಿಗಳು

'ಮೊಬೈಲ್ ಫೋನ್ ಇಲ್ಲದ ಕಾರಣ ಅಥವಾ ಮನೆಯಲ್ಲಿ ಇತರ ಯಾವುದಾದರೂ ನೆರವು ಸಿಗದ ಕಾರಣ ಆನ್‌ಲೈನ್ ತರಗತಿಯ ಅವಕಾಶದಿಂದ ವಂಚಿತರಾದ ವಿದ್ಯಾರ್ಥಿಗಳಿಗೆ ವಿಶೇಷ ಗಮನ ನೀಡಬೇಕು.' (ಶಿಕ್ಷಕರು, ಮಧ್ಯ ಪ್ರದೇಶ)

'ಶಾಲೆಗಳನ್ನು ದೀರ್ಘ ಕಾಲದವರೆಗೆ ಮುಚ್ಚಿದ್ದ ಕಾರಣ ಮಕ್ಕಳು ಕಲಿಕಾ ವಾತಾವರಣದಿಂದ ವಿಮುಖರಾಗಿದ್ದಾರೆ ಹಾಗೂ ತಮ್ಮಿಂದ ಈಗ ಕಲಿಯಲು ಸಾಧ್ಯವಿಲ್ಲ ಎಂದು ಅವರು ಭಾವಿಸಿರಬಹುದು. ಅವರನ್ನು ಮತ್ತೆ ಕಲಿಕೆಯಲ್ಲಿ ತೊಡಗಿಸುವ ಮೊದಲು, ಅವರು ನಿರಂತರವಾಗಿ ಶಾಲೆಗೆ ಬರುವ ವಾತಾವರಣವನ್ನು ಸೃಷ್ಟಿಸುವುದಕ್ಕಾಗಿ ಸ್ನೇಹಪರ ಮತ್ತು ಉಲ್ಲಾಸದಾಯಕ ವಾತಾವರಣವನ್ನು ನಾವು ರೂಪಿಸಬೇಕು.' (ಶಿಕ್ಷಕರು, ರಾಜಸ್ಥಾನ)

'ಕಲಿಕೆಯ ಗುರಿಯನ್ನು ಹೊಂದಿರುವ ಪಠ್ಯಕ್ರಮವನ್ನು ಮಕ್ಕಳ ಮೇಲೆ ಹೇರುವ ಬದಲಿಗೆ ಅವರ ಭಾವನಾತ್ಮಕ ಅಗತ್ಯತೆಗೆ ಸ್ಪಂದಿಸುವ ಮತ್ತು ಅವರಲ್ಲಿ ಕಲಿಕೆಯ ಹವ್ಯಾಸವನ್ನು ಮತ್ತೆ ಬೆಳೆಸುವ ವಿಚಾರಕ್ಕೆ ಶಾಲೆಗಳಲ್ಲಿ ಒತ್ತು ನೀಡಬೇಕು.' (ಶಿಕ್ಷಕರು, ಕರ್ನಾಟಕ)



# ಸಿ. ಶಾಲೆಗಳು ಪುನರಾರಂಭಿಸಿದ ನಂತರ 'ಮಾಮೂಲಿನಂತೆ ವ್ಯವಹಾರ' ಎನ್ನುವುದು ಒಂದು ಆಯ್ಕೆಯಲ್ಲ

ಕಲಿಕೆಯು ಒಂದು ಸಾಮಾಜಿಕ ಪ್ರಕ್ರಿಯೆಯಾಗಿದ್ದು ತರಗತಿ ಕೋಣೆಯಲ್ಲಿ ನಡೆಯುವ ಮುಖಾಮುಖಿ ಸಂವಾದದ ಮೂಲಕ ಇದನ್ನು ಇನ್ನಷ್ಟು ಗಟ್ಟಿಗೊಳಿಸಬಹುದು. ಮಕ್ಕಳಿಗೆ ಕಲಿಕಾ ಪ್ರಕ್ರಿಯೆಯಲ್ಲಿ ಮಾರ್ಗದರ್ಶನವಲ್ಲದೆ ಸಾಮಾಜಿಕ ಹಾಗೂ ಭಾವನಾತ್ಮಕ ನೆರವು ಬೇಕಾಗುತ್ತದೆ. ಹೀಗಾಗಿ, 'ಬೇರೆಯೇ ವಿಧದಲ್ಲಾದರೂ' ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಒಟ್ಟಿಗೆ ತರಬೇಕಾದುದು ಅತ್ಯವಶ್ಯಕ.

ದೀರ್ಘ ಕಾಲದವರೆಗೆ ಶಾಲೆಗಳು ಮುಚ್ಚಿದ್ದುದನ್ನು ಪರಿಗಣಿಸಿದರೆ 'ಮಾಮೂಲಿನಂತೆ ವ್ಯವಹಾರ' ಎನ್ನುವ ಪ್ರವೃತ್ತಿಯು ಇದಕ್ಕೆ ಮಾತ್ರವಲ್ಲದೆ ಮುಂದಿನ ತಲೆಮಾರಿನ ವಿದ್ಯಾರ್ಥಿಗಳಿಗೂ ಅಪಾಯಕಾರಿ ಎನಿಸಲಿದೆ. ಕಳೆದ ಕೆಲವು ದಶಕಗಳಲ್ಲಿ ನಾವು ಸಾಧಿಸಿರುವ ಗಳಿಕೆಗಳು  ನಷ್ಟವಾಗದಂತೆ ನೋಡಿಕೊಳ್ಳಲು ಪಠ್ಯಕ್ರಮ, ಕಲಿಕಾ ಸಾಮಗ್ರಿಗಳು, ಶಾಲೆ ಮತ್ತು ತರಗತಿ ಕೋಣೆ ಪ್ರಕ್ರಿಯೆಗಳಲ್ಲಿ ನಾವು ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳುವ ಮೂಲಕ  ಬದಲಾದ ಸನ್ನಿವೇಶಕ್ಕೆ ಸ್ಪಂದಿಸಬೇಕು ಮಾತ್ರವಲ್ಲದೆ ನಮ್ಮ ಶಿಕ್ಷಕರಿಗೂ ಬೆಂಬಲ ನೀಡಬೇಕು.[6]

ಒಟ್ಟು 143 ದೇಶಗಳಲ್ಲಿ[7] ನಡೆಯುತ್ತಿರುವ ಸಮೀಕ್ಷೆಯೊಂದರ ಪ್ರಕಾರ ಈ ಸಾಂಕ್ರಾಮಿಕದ ಅವಧಿಯಲ್ಲಿ ಎಲ್ಲಾ ಶೈಕ್ಷಣಿಕ ಹಂತಗಳಲ್ಲಿ ಸರಾಸರಿ 79% ಬೋಧನಾ-ಕಲಿಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಶಾಲೆಗಳ ಬಾಗಿಲುಗಳು ಮುಚ್ಚಿದ್ದವು (ಅಧಿಕ ಆದಾಯದ ದೇಶಗಳಲ್ಲಿ 53 ದಿನಗಳು ಮತ್ತು ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳಲ್ಲಿ 115 ದಿನಗಳು). ಈ ನಷ್ಟವನ್ನು ಸರಿದೂಗಿಸಲು ತೆಗೆದುಕೊಂಡ ಕ್ರಮಗಳ ಪೈಕಿ 41% ದೇಶಗಳು ಶೈಕ್ಷಣಿಕ ವರ್ಷವನ್ನು ವಿಸ್ತರಿಸಿರುವುದನ್ನು ವರದಿ ಮಾಡಿದರೆ, 42% ದೇಶಗಳು ಪಠ್ಯಕ್ರಮದ ಕೆಲವು ವಿಷಯಗಳು ಅಥವಾ ಕೌಶಲ್ಯಗಳಿಗೆ ಆದ್ಯತೆ ನೀಡಿರುವುದನ್ನು ವರದಿ ಮಾಡಿವೆ. ಮೂರನೇ ಎರಡಕ್ಕಿಂತ ಹೆಚ್ಚಿನ ದೇಶಗಳು ಶಾಲೆ ಪುನರಾರಂಭಗೊಂಡಾಗ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಕಲಿಕಾ ಅಂತರವನ್ನು ಸರಿಪಡಿಸುವುದಕ್ಕಾಗಿ ಪರಿಹಾರ ಕ್ರಮಗಳನ್ನು ಅಳವಡಿಸಿರುವುದನ್ನು ವರದಿ ಮಾಡಿವೆ. ಇವುಗಳಲ್ಲಿ ಹೆಚ್ಚಿನವು ಅಧಿಕ ಅಥವಾ ಮೇಲ್ಮಧ್ಯಮ ಆದಾಯದ ದೇಶಗಳು. ಶಾಲೆಗಳು ಪುನರಾರಂಭಗೊಂಡಾಗ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಕಲಿಕಾ ಅಂತರವನ್ನು ಸರಿಪಡಿಸುವುದಕ್ಕಾಗಿ ಕೆಲವು ದೇಶಗಳು ಆಪ್ತ ಸಮಾಲೋಚಕರು ಮತ್ತು ವಿಶೇಷ ತರಬೇತಿ ಪಡೆದ ಶಿಕ್ಷಕರ ಆಯ್ಕೆ ಸೇರಿದಂತೆ ನೇಮಕಾತಿಯ ಮೇಲಿನ ಹೂಡಿಕೆಯನ್ನು ಹೆಚ್ಚಿಸಿವೆ. ಅಲ್ಲದೆ ಸಮಾಜೋ-ಆರ್ಥಿಕವಾಗಿ ಅನನುಕೂಲತೆಗೆ ತಳ್ಳಲ್ಪಟ್ಟ ಮಕ್ಕಳಿಗೆ ನೆರವು ಒದಗಿಸಲು ವಿಶೇಷ ಕ್ರಮಗಳನ್ನು ಯೋಜಿಸಿವೆ. ಜೊತೆಗೆ ಬೇಸಿಗೆ ರಜೆಯಲ್ಲಿ ಚಟುವಟಿಕೆಗಳನ್ನು ಆಯೋಜಿಸುವುದು, ಶಾಲಾ ದಿನಗಳ ವಿಸ್ತರಣೆ, ಶಾಲಾ ದಿನದ ವೇಳೆ ಮತ್ತು ನಂತರ ಹೆಚ್ಚುವರಿ ನೆರವು ಮುಂತಾದ ನಿರ್ಧಾರ ಹಾಗೂ ಪರಿಹಾರ ಕ್ರಮಗಳನ್ನು ಅಳವಡಿಸಿಕೊಂಡಿವೆ.[8]

ಈ ಮಹಾಪಿಡುಗು ಒಂದು ಅರ್ಥದಲ್ಲಿ ವಿಶ್ವದ ಶೈಕ್ಷಣಿಕ ವ್ಯವಸ್ಥೆಗಳಲ್ಲಿರುವ ಉತ್ತಮ ಮತ್ತು ಕೆಟ್ಟ ಅಂಶಗಳನ್ನು ಬೆಳಕಿಗೆ ತಂದಿದೆ. ಕೆಲವು ದೇಶಗಳು ಚಾಲ್ತಿಯಲ್ಲಿರುವ ಸಮಸ್ಯೆಗಳಿಗೆ 'ತ್ವರಿತ ಪರಿಹಾರ'ದ ವಿಧಾನವನ್ನು ಅಳವಡಿಸಿಕೊಳ್ಳುವ ಬದಲಿಗೆ 'ಶಾಶ್ವತ ಪರಿಹಾರ'ದ ಅವಕಾಶಗಳನ್ನು ಶೋಧಿಸಿವೆ.

ಈ ಮಹಾ ಸಾಂಕ್ರಾಮಿಕವು ವ್ಯಾಪಿಸಿದ ನಂತರ ಪ್ರಕಟಗೊಂಡ ವರದಿಗಳು ಉಲ್ಲೇಖಿಸಿದಂತೆ, ನಮ್ಮ ಶಿಕ್ಷಕರು ಮತ್ತು ಅವರ ಬದ್ಧತೆಯು ನಮ್ಮ ದೇಶದ ಪಾಲಿಗೆ ದೊಡ್ಡ ಶಕ್ತಿ ಎನಿಸಿವೆ. ತಮ್ಮ ವಿದ್ಯಾರ್ಥಿಗಳ ಅಗತ್ಯತೆಗಳೇನು ಎಂಬುದನ್ನು ಸ್ಪಷ್ಟ ಮಾತುಗಳಿಂದ ಹೇಳಲು ಹಾಗೂ ಶಾಲೆಗಳು ಮತ್ತೆ ಕಾರ್ಯಾರಂಭ ಮಾಡಿದಾಗ ಪರಿಸ್ಥಿತಿ ಹೇಗಿರಬಹುದು ಎಂಬುದನ್ನು ಊಹಿಸಲು ಈ ಶಿಕ್ಷಕರಿಂದ ಮಾತ್ರ ಸಾಧ್ಯ. ಹೀಗಾಗಿ ಶಿಕ್ಷಕರ ಮೇಲೆ ನಮ್ಮ ನಂಬಿಕೆಯನ್ನಿರಿಸಬೇಕು ಮತ್ತು ಅವರನ್ನು ಸಂಪನ್ಮೂಲಗಳ ಮೂಲಕ ಸಶಕ್ತಗೊಳಿಸಬೇಕು. ಅಲ್ಲದೆ ಪ್ರತಿ ಮಗುವಿನ ಕಲಿಕೆಗೂ ಅವರು ಸಹಾಯ ಮಾಡುವಂತಾಗಲು ಅವರಿಗೆ ಸ್ವಾಯತ್ತತೆಯನ್ನು ನೀಡಬೇಕು. ಇದಕ್ಕೆ ಬದಲಾಗಿ ಬೇರೆ ಯಾವುದೇ ಮಾರ್ಗಗಳಿಲ್ಲ. ಪ್ರತಿ ಶಾಲೆಯಲ್ಲಿಯೂ ಸಾಕಷ್ಟು ಪ್ರಮಾಣದಲ್ಲಿ ಶಿಕ್ಷಕರು ಲಭ್ಯರಿದ್ದಾರೆ ಎಂಬುದನ್ನು ನಾವು ಖಚಿತಪಡಿಸಿಕೊಳ್ಳಬೇಕು. ಜೊತೆಗೆ ಈ ಸನ್ನಿವೇಶದಲ್ಲಿ ಅವರನ್ನು ನಮ್ಮ ಜೊತೆಗಾರರನ್ನಾಗಿಸಬೇಕು. ಬದಲಾದ ಈ ಸನ್ನಿವೇಶದಲ್ಲಿ ಮಕ್ಕಳು ಕಲಿಯುವಂತಹ ವಾತಾವರಣವನ್ನು ಅವರು ನಿರ್ಮಿಸುವಂತಾಗಲು ನಾವು ಅವರಿಗೆ ಬೆಂಬಲ ನೀಡಬೇಕು.

6 Azim Premji Foundation. (2021). Re-opening schools in pandemic times. http://bit.do/School-Reopenings; The Wire. (2021, August 9). Schools to face worst crisis ever when they reopen. [Video]. YouTube. https://www.youtube.com/watch?v=6lJj1iaeVGs

7 UNESCO, UNICEF, the World Bank and OECD (2021). What's Next? Lessons on Education Recovery: Findings from a Survey of Ministries of Education amid the COVID-19 Pandemic. Paris, New York, Washington D.C.: UNESCO, UNICEF, World Bank. http://uis.unesco.org/sites/default/files/documents/lessons_on_education_recovery.pdf

8 Dorn, E., Hancock, B., Sarakatsannis, J., Viruleg, E. (2021). COVID-19 and education: The lingering effects of unfinished learning. https://www.mckinsey.com/industries/public-and-social-sector/our-insights/covid-19-and-education-the-lingering-effects-of-unfinished-learning; Ehren, M., Turkeli, R. (2020). How to repair learning loss from school closures during COVID-19 pandemic: which interventions and programmes are effective? Learn Research Institute. https://www.researchinstitutelearn.nl/en/professionals-en/how-to-repair-learning-loss-from-school-closures-during-covid-19-pandemic-which-interventions-and-programmes-are-effective/; UNESCO, UNICEF, the World Bank and OECD (2021). What's Next? Lessons on Education Recovery: Findings from a Survey of Ministries of Education amid the COVID-19 Pandemic. Paris, New York, Washington D.C.: UNESCO, UNICEF, World Bank. http://uis.unesco.org/sites/default/files/documents/lessons_on_education_recovery.pdf

**ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ**
ಬುರಗುಂಟೆ ಹಳ್ಳಿ, ಸರ್ಜಾಪುರ ಹೋಬಳಿ, ಆನೇಕಲ್ ತಾಲೂಕು,
ಬಿಲ್ಲಾಪುರ ಗ್ರಾಮ ಪಂಚಾಯತ್, ಬೆಂಗಳೂರು - 562125

080-6614 5136
www.azimpremjiuniversity.edu.in

**ಫೇಸ್‌ಬುಕ್:** /azimpremjiuniversity **ಇನ್‌ಸ್ಟಾಗ್ರಾಮ್:** @azimpremjiuniv **ಟ್ವಿಟ್ಟರ್:** @azimpremjiuniv